( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ಅಸಲು ದಾವೆ ನಂ.306/2021**

**ದಿನಾಂಕಃ 03-06-2023, ಪಿ ಡಬ್ಲ್ಯೂ–1**

ಪಾಟೀ ಸವಾಲು ಃ ಶ್ರೀ ಡಿ ಆರ್ ವಕೀಲರಿಂದಃ

ನನ್ನ ಮಾವ ನರಸಿಂಹಯ್ಯ ರವರಿಗೆ ಒಟ್ಟು 4 ಜನ ಮಕ್ಕಳು ಎಂದರೆ ಸರಿ. ಮೊದಲನೆಯವರು ನನ್ನ ಗಂಡ ಗೋವಿಂದರಾಜು, ಎರಡನೇ ವೆಂಕಟೇಶ, ಮೂರನೇ ನಾಗಮ್ಮ ಮತ್ತು ನಾಲ್ಕನೆಯವರು ಕಮಲಿ ಎಂದರೆ ಸರಿ. ಕಮಲಿ ರವರಿಗೆ ನನ್ನ ಮಾವ ಸುಬ್ಬಯ್ಯ ರವರ ಜೊತೆ ವಿವಾಹ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕಮಲಿ ರವರನ್ನು ವಿವಾಹ ಮಾಡಿದ ನಂತರ ಸುಬ್ಬಯ್ಯರವರನ್ನು ನನ್ನ ಮಾವ ಕೆಲವು ದಿನಗಳವರೆಗೆ ಮನೆಯಲ್ಲಿ ಇರಿಸಿಕೊಂಡಿದ್ದರು. ನಂತರ ಕಮಲಿ ಯವರು ಸುಬ್ಬಯ್ಯ ನವರನ್ನು ಬಿಟ್ಟು ಬೇರೆಯವರನ್ನು ಮದುವೆ ಮಾಡಿಕೊಂಡರು ಎಂದರೆ ಸರಿ. ಕಮಲಿ ಬೇರೆಯವರನ್ನು ಮದುವೆಯಾದ ನಂತರ ನನ್ನ ಮಾವ ಸುಬ್ಬಯ್ಯ ರವರಿಗೆ ಎಲ್ಲಮ್ಮ ರವರನ್ನು ಮದುವೆ ಮಾಡಿಸಿದರು ಎಂದರೆ ಸರಿಯಲ್ಲ.

ನನ್ನ ಮಾವ ಎಲ್ಲಮ್ಮರವರನ್ನು ಸುಬ್ಬಯ್ಯರವರೊಂದಿಗೆ ವಿವಾಹ ಮಾಡಿದ ನಂತರ ದಾವಾ ಆಸ್ತಿಯಲ್ಲಿ 1 ಎಕರೆ ಜಮೀನನ್ನು ಮನೆ ಕಟ್ಟಿಕೊಂಡು ವಾಸಮಾಡುವಂತೆ ಸುಬ್ಬಯ್ಯ ರವರಿಗೆ ನೀಡಿದ್ದರು ಎಂದರ ಸರಿಯಲ್ಲ. ನನ್ನ ಮಾವ ದನದ ಕೊಟ್ಟಿಗೆಯನ್ನು ಸುಬ್ಬಯ್ಯ ರವರ ವಾಸಕ್ಕೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಎಲ್ಲಮ್ಮ ರವರು ಸದರಿ ದನದ ಕೊಟ್ಟಿಗೆ ಖಾತೆಯನ್ನು ತಮ್ಮ ಹೆಸರಿಗೆ ಪಂಚಾಯತಿಯಲ್ಲಿ ವರ್ಗಾಯಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಎಲ್ಲಮ್ಮ ಮತ್ತು ಸುಬ್ಬಯ್ಯ ರವರಿಗೆ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸುಬ್ಬಯ್ಯನ ಮಕ್ಕಳುಗಳು ಎಂದರೆ ಸರಿ.

ಎಲ್ಲಮ್ಮ ರವರ ಪೌತಿ ನಂತರ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆ ಆಗಿ ಪ್ರತಿವಾದಿಗಳು ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ಮತ್ತು 2 ರವರು ವಾಸವಿರುವ ಮನೆ ನಮ್ಮ ಜಮೀನಿನ ಮಧ್ಯ ಇದೆ ಎಂದರೆ ಸರಿಯಲ್ಲ.

ಸುಬ್ಬಯ್ಯರವರ ಪೌತಿ ನಂತರ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಾವ ಯಾವುದೇ ದಾಖಲೆಯನ್ನು ಮಾಡದೆ ಪ್ರತಿವಾದಿಗಳ ತಂದೆ ಸುಬ್ಬಯ್ಯ ರವರಿಗೆ ದಾವಾ ಆಸ್ತಿಯ 3 ಎಕರೆ ಜಮೀನಿನ ಪೈಕಿ 1 ಎಕರೆ ಜಮೀನನ್ನು ನೀಡಿದ್ದರಿಂದ ಪ್ರತಿವಾದಿಗಳು ಸಹಾ ಈ ದಾವಾಆಸ್ತಿಯಲ್ಲಿ ಹಕ್ಕುದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿರುವ ಮನೆಯಲ್ಲಿ ದನಗಳನ್ನು ಕಟ್ಟಲು ಮಾತ್ರ ಉಪಯೋಗಿಸುತ್ತಿದ್ದೆವು ಎಂದರೆ ಸರಿ. ನಿಪಿ-4 ರಿಂದ 6 ರಲ್ಲಿರುವ ಮನೆಯಲ್ಲಿ ನಾವು ದನಗಳನ್ನು ಕಟ್ಟಿ ಹಾಕುತ್ತಿದ್ದೆವು ಎಂದರೆ ಸರಿ. ನಿಪಿ-4 ರಂದ 6 ರಲ್ಲಿರುವ ಮನೆಯಲ್ಲಿ ಪ್ರತಿವಾದಿಗಳು ಹಾಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ನಿಪಿ-4 ರಿಂದ 6 ರಿಂದ ಇರುವ ಮನೆಯಲ್ಲಿ ಪ್ರತಿವಾದಿಗಳು ಟಿವಿ ಯ ಕೇಬಲ್ ಸಂಪರ್ಕ ಮತ್ತು ವಿದ್ಯುತ್‌ಚಕ್ತಿ ಸಂಪರ್ಕವನ್ನು ಪಡೆದುಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಿಪಿ-4 ರಿಂದ 6 ಛಾಯಚಿತ್ರ ಗಳನ್ನು ನಾನು ದಾವೆ ಸಲ್ಲಿಸುವ ಪೂರ್ವದಲ್ಲಿ ತೆಗೆಸಿದ ಪೋಟೋಗಳು ಎಂದರೆ ಸರಿ.

ಪ್ರತಿವಾದಿ ಪರ ವಕೀಲರು ಮುಂದುವರೆ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು